# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| 1)ಉಜ್ಜಿನ ರುದ್ರಪ್ಪ ತಂದೆ ಈರಪ್ಪ,<br>2)ಉಜ್ಜಿನಿ ನಾಗರಾಜ ತಂದೆ ಉಜ್ಜಿನಿ ರುದ್ರಪ್ಪ,<br>ಹಿರೇಹಡಗಲಿ ಗ್ರಾಮ, ಹಡಗಲಿ ತಾ.<br>{ಶ್ರೀ ಎಸ್.ಶಿವಲಿಂಗಪ್ಪ, ವಕೀಲರು, ಹಡಗಲಿ} | ಉಜ್ಜಿನಿ ಬಸಪ್ಪ ತಂದೆ ಲೇಟ್ ವೀರಪ್ಪ,<br>ಹಿರೇಹಡಗಲಿ ಗ್ರಾಮ, ಹಡಗಲಿ ತಾ.<br>{ಶ್ರೀ ಬಸವರಾಜ, ವಕೀಲರು, ಹಡಗಲಿ} |

ವಿವಾದಿತ ಜಮೀನಿನ ವಿವರ:-

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹಿರೇಹಡಗಲಿ | 514/ಎ | 2-66 | ಖುಷ್ಕಿ |

*****

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹಿರೇಹಡಗಲಿ ಗ್ರಾಮದ ಸ.ನಂ.514/ಎ ವಿ:2-66 ಜಮೀನಿಗೆ ಸಂಬಂಧಿಸಿದಂತೆ, ಹಿರೇಹಡಗಲಿ ಗ್ರಾಮದ ನಿವಾಸಿಯಾದ ಉಜ್ಜಿನಿ ರುದ್ರಪ್ಪ ತಂದೆ ಈರಪ್ಪ ಇವರು ಹಿರೇಹಡಗಲಿ ಗ್ರಾಮದ ಉಜ್ಜಿನಿ ನಾಗರಾಜ ತಂದೆ ಉಜ್ಜಿನಿ ರುದ್ರಪ್ಪ ಇವರಿಗೆ ನೋಂದಾಣಯಿತ ದಸ್ತಾವೇಜು ಸಂ.3421/15-16 ದಿ:17-12-2015 ರಂದು ಸ್ಥಿರಾಸ್ತಿಯ ದಾನಪತ್ರದ ಮೂಲಕ ನೀಡಿರುತ್ತಾರೆಂದು ಉಪನೋಂದಣಾಧಿಕಾರಿಗಳು, ಹೂವಿನಹಡಗಲಿ ಇವರು ವರದಿ ಮಾಡಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸು ದಿನಾಂಕ 26-12-2015 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ 14-01-2016 ರಂದು ಹಿರೇಹಡಗಲಿ ಗ್ರಾಮದ ಉಜ್ಜಿನಿ ಬಸಪ್ಪ ತಂದೆ ಲೇಟ್ ವೀರಪ್ಪ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ನಂ.50/2015-16 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:28-03-2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಪ್ರಕರಣದ ವಿಚಾರಣೆಗೆ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಸದರಿ ಆಸ್ತಿಯು ತನ್ನ ಅಣ್ಣನ ಹೆಸರಿಗೆ ಇದ್ದು, ಪಾಲು ಆಗಿರುವುದಿಲ್ಲ. ತನಗೂ ಹಿಸ್ಸೆ ಇರುತ್ತದೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ತಕರಾರುದಾರರ ಪರ ವಕೀಲರು ಹಾಜರಾಗಿ ಲಿಖಿತ ವಾದಪತ್ರ ಸಲ್ಲಿಸಿದರು. ಅರ್ಜಿದಾರರು ಈಗಾಗಲೇ ಪಾಲು ಆಗಿದೆ ಎಂದು ಮೌಖಿಕವಾಗಿ ತಿಳಿಸಿದರು. ಅರ್ಜಿದಾರರ ಪರ ವಕೀಲರು ಹಾಜರಾಗಿ ಲಿಖಿತ ವಾದಪತ್ರ, ದಿ:14-11-88 ರ ಪಾಲು ವಿಭಾಗ ಪ್ರತಿ, ಖಂಡಿತ ಕರಾರು ಪತ್ರದ ಪ್ರತಿ, ಹಕ್ಕು ಬಿಡುಗಡೆ ಪತ್ರದ ಪ್ರತಿ, ಸ್ಥಿರಾಸ್ತಿಯ ದಾನಪತ್ರದ ಪ್ರತಿ ಸಲ್ಲಿಸಿದರು.

ಸದರಿ ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ಅರ್ಜಿದಾರರ ಪರ ವಕೀಲರು ಸಲ್ಲಿಸಿದ ಲಿಖಿತ ವಾದಪತ್ರದಲ್ಲಿ ದಿನಾಂಕ 14-11-1988 ರಂದು ಉಜ್ಜಿನಿ ಈರಪ್ಪನ ಮಕ್ಕಳಾದ 1)ಉಜ್ಜಿನಿ ರುದ್ರಪ್ಪ, 2)ಉಜ್ಜಿನಿ ಬಸಪ್ಪ, 3)ಉಜ್ಜಿನಿ ಮಂಜಪ್ಪ ಇವರುಗಳ ನಡುವೆ ಪಾಲು ವಿಭಾಗವಾಗಿದ್ದು, ಸದರಿ ಪಾಲು ವಿಭಾಗದಲ್ಲಿ ಸ.ನಂ.514/ಎ ವಿ:3-92 ಜಮೀನು ಅಣ್ಣ ತಮ್ಮಂದಿರ ನಡುವೆ ಒಂದು-ಒಂದು ಎಕರೆಯಂತೆ ಹಿಸ್ಸಾ ಪಾಲಾಗಿದ್ದು ಇರುತ್ತದೆ. ಅದೇ ಪ್ರಕಾರವಾಗಿ ಅವರವರ ಹಿಸ್ಸೆಗೆ ಬಂದ ಜಮೀನನ್ನು ಸ್ವಾಧೀನಾನುಭವವನ್ನು ಅನುಭೋಗಿಸುತ್ತಾ ಬಂದಿರುತ್ತಾರೆ. ಸದರಿ ಬಸಪ್ಪನು ತನ್ನ ಅಣ್ಣನಾದ ಉಜ್ಜಿನಿ ರುದ್ರಪ್ಪನಿಗೆ ದಿನಾಂಕ 22-12-1999 ರಲ್ಲಿ ಬಸಪ್ಪನು ಸ.ನಂ.514/ಎ ಪೈಕಿ ತನ್ನ ಹಿಸ್ಸೆಗೆ ಬಂದ ಜಮೀನನ್ನು ಕಂಡಿತ ಕ್ರಯ ಕರಾರಿನ ಮೂಲಕ ಮಾರಾಟ ಮಾಡಿದ್ದು, ನಂತರ ದಿ:4-9-2007 ರಲ್ಲಿ ಹಕ್ಕು ಬಿಡುಗಡೆ ಪತ್ರ ಮಾಡಿ ಕೊಟ್ಟಿರುತ್ತಾರೆ. ಆ ಪ್ರಕಾರವಾಗಿ 1999 ರಿಂದ ಸದರಿ ಜಮೀನನ್ನು ರುದ್ರಪ್ಪ ಸ್ವಾಧೀನಾನುಭವದಲ್ಲಿರುತ್ತಾನೆ. ಸದರಿ ಬಸಪ್ಪನಿಂದ ಖರೀದಿಸಿದ ಜಮೀನನ್ನು ಉಜ್ಜಿನಿ ರುದ್ರಪ್ಪನು ತನ್ನ ಮಗನಾದ ಉಜ್ಜಿನಿ ನಾಗರಾಜನಿಗೆ ದಾನಪತ್ರ ಮೂಲಕ ದಿ:17-12-2015 ರಂದು ಸ್ವಾಧೀನಾನುಭೋಗ ಮತ್ತು ಹಕ್ಕನ್ನು ವರ್ಗಾಯಿಸಿರುತ್ತಾನೆ. ಸದರಿ ಎದುರುದಾರರು ಸಲ್ಲಿಸಿದ ತಕರಾರು ಸುಳ್ಳಿನಿಂದ ಕೂಡಿದ್ದು ಸತ್ಯಕ್ಕೆ ದೂರವಾಗಿವೆ. ಆದ್ದರಿಂದ ಮೇಲಿನ ಸಂಗತಿಗಳನ್ನು ಪರಿಗಣಿಸಿ ಅರ್ಜಿದಾರರ ಮನವಿಯನ್ನು ಮನ್ನಿಸಇ ಹಕ್ಕು ಬದಲಾವಣೆಗೆ ಆದೇಶಿಸಬೇಕೆಂದು ಪ್ರಾರ್ಥಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ದಿ:14-11-88 ರ ಪಾಲು ವಿಭಾಗ ಪ್ರತಿ, ದಿ:22-12-1999 ರ ಖಂಡಿತ ಕರಾರು ಪತ್ರದ ಪ್ರತಿ, ದಿ:4-9-2007 ರ ಹಕ್ಕು ಬಿಡುಗಡೆ ಪತ್ರಗಳು ನೋಂದಾಯಿತವಾಗಿರುವುದಿಲ್ಲ. ಮತ್ತು ಸದರಿ ದಾಖಲೆಗಳ ಮೇಲೆ ಹಕ್ಕು ಬದಲಾವಣೆ ವ್ಯವಹಾರ ನಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ತಕರಾರುದಾರರ ಪರ ವಕೀಲರು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಅರ್ಜಿದಾರಾದ ಉಜ್ಜಿನಿ ರುದ್ರಪ್ಪ ಮತ್ತು ಅಣ್ಣ ತಮ್ಮಂದಿರುಗಳ ಮಧ್ಯೆ ಯಾವುದೇ ಪಾಲು ವಿಭಾಗ ಆಗಿಲ್ಲ. ಈಗಲೂ ಸಹ ಅವಿಭಕ್ತ ಕುಟುಂಬದಲ್ಲಿದ್ದು, ಯಾವುದೇ ಆಸ್ತಿಗಳು ಪಾಲು ವಿಭಾಗಗಳು ಆಗಿಲ್ಲ. ಕೇವಲ ಸೃಷ್ಟಿ ಮಾಡಿಕೊಂಡಂತಹ ದಾಖಲೆಗಳಾಗಿವೆ. ಅರ್ಜಿದಾರರು ಪ್ಯಾರ ನಂ.1 ರಲ್ಲಿ ಹೇಳಿರುವುದು ಎಲ್ಲಾ ಸುಳ್ಳಿನಿಂದ ಕೂಡಿರುತ್ತದೆ. ಎಲ್ಲಾ ಆಸ್ತಿಗಳು ಜಂಟಿ ಸ್ವಾಧೀನದಲ್ಲಿರುತ್ತವೆ. ಯಾವುದೇ ಹಿಸ್ಸೆ ವಗೈರೆ ಆಗಿಲ್ಲ. ಪ್ಯಾರ ನಂ.2 ರಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳಿನಿಂದ ಕೂಡಟಿರುತ್ತವೆ. ದಿ:22/12/1999 ರಲ್ಲಿ ಯಾವುದೇ ಪಾಲು ಪಟ್ಟಿ ಆಗಿಲ್ಲ. ಕೇವಲ ಅಣ್ಣ ತಮ್ಮಂದಿರುಗಳಿಗೆ ಮೋಸ ಮಾಡಿ ತಮ್ಮ ಮನಸ್ಸಿಗೆ ಬಂದಂತೆ ಅರ್ಜಿದಾರರು ಸ.ನಂ.514/ಎ ವಿ:2-66 ಎಕರೆ ಭೂಮಿಯನ್ನು ಬಸಪ್ಪನ ಕಡೆಯಿಂದ ಖಂಡಿತ ಕ್ರಯಕ್ಕೆ ಪಡೆದಿರುತ್ತಾನೆ. ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಾನೆ

ಹಾಗೂ ಖಂಡಿತ ಕ್ರಯ ಮತ್ತು ಕ್ರಯ ಪತ್ರಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಕಂಡಿತ ಕ್ರಯ ಎಂದು ಗಣಿಸಿದ ಕ್ರಯಪತ್ರವಾಗಲಾರದು. ಇದೇ ಕಾರಣದಿಂದ ಈ ಅರ್ಜಿಯು ವಜಾಗೊಳ್ಳತಕ್ಕದ್ದು. ಪ್ಯಾರ ನಂ.3 ರಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತದೆ. ಅರ್ಜಿದಾರರು ಖರೀದಿಸಿದ ಬಗ್ಗೆ ಎಲ್ಲಿಯೂ ರಿಜಿಸ್ಟರ್ ಖರೀದಿ ಪತ್ರ ಹಾಜರುಪಡಿಸಿಲ್ಲ. ಆದ ಕಾರಣ ಯಾವುದೇ ಪಿತ್ರಾರ್ಜಿತ ಆಸ್ತಿಯ ದಾನ ಮಾಡಲು ಬರುವುದಿಲ್ಲ. ಈ ಸದರಿ ಆಸ್ತಿಯು ಎದುರುದಾರರ ಸ್ವಂತ ಸ್ವಾಧೀನ ಹಾಗೂ ಹಕ್ಕು ಆದೀನ ಅನುಭವದಲ್ಲಿರುತ್ತದೆ. ಯಾವುದೇ ಖರೀದಿ ಕೊಟ್ಟಿಲ್ಲ. ಅರ್ಜಿದಾರರು ಪಿತ್ರಾರ್ಜಿತ ಆಸ್ತಿಯನ್ನು ದಾನಪತ್ರ ಬರೆಯಲು ಬರುವುದಿಲ್ಲ. ಹಾಗೂ ವಜಾಗೊಳಿಸಲು ಅರ್ಹತೆಯನ್ನು ಹೊಂದಿರುತ್ತದೆ. ಹಾಗೂ ಅರ್ಜಿದಾರರು ತಮ್ಮ ಅರ್ಜಿಯ ಪ್ಯಾರ ನಂ.1 ರಿಂದ 4 ರವರೆಗೆ ಹೇಳಿದ ಎಲ್ಲಾ ಅಂಶಗಳು ಕಾನೂನು ನಿಯಮಕ್ಕೆ ವಿರುದ್ಧವಾಗಿವೆ. ಹೀಗಾಗಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

ಹಾಲಿ ವಿವಾದಿತ ಜಮೀನು ಉಜ್ಜಿನಿ ರುದ್ರಪ್ಪ ತಂದೆ ಈರಪ್ಪ ಇವರ ಹೆಸರಿಗೆ ಕಂಪ್ಯೂಟರ್ ಪಹಣಿಯಲ್ಲಿ ನಮೂದು ಇರುತ್ತದೆ. ಅರ್ಜಿದಾರರು ಸಲ್ಲಿಸಿದ ಕೈ ಬರಹದ ವಂಶವೃಕ್ಷ ಪ್ರಕಾರ ಅರ್ಜಿದಾರ-2 ರವರು ಅರ್ಜಿದಾರ-1 ರವರ ಹಿರಿಯ ಮಗನಾಗಿರುತ್ತಾನೆ. ಉಜ್ಜಯಿನಿ ರುದ್ರಪ್ಪ ಇವರಿಗೆ 1)ಉಜ್ಜಯಿನಿ ನಾಗರಾಜ, 2)ಉಜ್ಜಯಿನಿ ವೀರೇಶ ಮತ್ತು 3)ಉಜ್ಜಯಿನಿ ಗೌರಮ್ಮ ಇವರು ಮಕ್ಕಳಾಗಿರುತ್ತಾರೆ. ತಕರಾರುದಾರರು ಸಲ್ಲಿಸಿದ ವಂಶವೃಕ್ಷ ಪ್ರಮಾಣಪತ್ರದ ಅಫಿಡೆವಿಟ್ ಪ್ರತಿಯಲ್ಲಿ ಉಜ್ಜಿನಿ ವೀರಪ್ಪ ಮತ್ತು ಉಜ್ಜಿನಿ ಹಾಲಮ್ಮ ಇವರಿಗೆ 1)ಉಜ್ಜಿನಿ ಕೊಟ್ರಪ್ಪ, 2)ಉಜ್ಜಿನಿ ಕಟ್ಟೆಪ್ಪ, 3)ಈರಮ್ಮ, 4)ಉಜ್ಜಿನಿ ರುದ್ರಪ್ಪ, 5)ಉಜ್ಜಿನಿ ಬಸಪ್ಪ, 6)ಕಾಳಮ್ಮ, 7)ಉಜ್ಜಿನಿ ಮಂಜಪ್ಪ ಮತ್ತು 8)ಉಜ್ಜಿನಿ ಶಂಭಪ್ಪ ಇವರು ಮಕ್ಕಳಾಗಿರುತ್ತಾರೆ.

1968-69ರಿಂದ 1980 ರವರೆಗಿನ ಕೈ ಬರಹ ಪಹಣಿ ಕಾಲಂ ನಂ.9 ರಲ್ಲಿ ಉಜ್ಜಿನಿ ಯೀರಪ್ಪ ತಂದೆ ಕಟ್ಟೆಪ್ಪ ಎಂದು ಕಾಲಂ ನಂ.10 ರಲ್ಲಿ ಪೂರ್ವ ಪಟ್ಟಾದಾರ ಪೋತಿ ವಾರ್ಸ ಹಕ್ಕು ಆದಿನ ಅನುಭವ ಮತ್ತು ವಿಲ್ಲು ವಿಭಾಗ ಪ್ರಕಾರ ಎಂದು ನಮೂದು ಇರುತ್ತದೆ. ನಂತರದ ಕೈ ಬರಹ ಪಹಣಿಯಲ್ಲಿ ಉಜ್ಜಿನಿ ರುದ್ರಪ್ಪ ತಂದೆ ಈರಪ್ಪ ಎಂದು ಕಾಲಂ ನಂ.9 ರಲ್ಲಿ ನಮೂದು ಆಗಿದ್ದು, ಕಾಲಂ ನಂ.10 ರಲ್ಲಿ ಯಾವುದೇ ಮ್ಯುಟೇಷನ್ ಸಂಖ್ಯೆ ನಮೂದು ಆಗಿರುವುದಿಲ್ಲ. ಅರ್ಜಿದಾರರಾಗಲೀ ಅಥವಾ ತಕರಾರುದಾರರಾಗಲೀ ಸದರಿ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಮ್ಯುಟೇಷನ್ ಆಗಲೀ ಅಥವಾ ಪಾಲು ವಿಭಾಗವಾಗಲಿ ಸಲ್ಲಿಸಿಲ್ಲ. ಮೂಲ ಪಟ್ಟಾದಾರ ಉಜ್ಜಿನಿ ಯೀರಪ್ಪ ತಂದೆ ಕಟ್ಟೆಪ್ಪ ಇದ್ದು, ಉಜ್ಜಿನಿ ಯೀರಪ್ಪನ ಮಕ್ಕಳೇ ಅರ್ಜಿದಾರ-1 ಮತ್ತು ತಕರಾರುದಾರಾಗಿರುತ್ತಾರೆ ಎಂದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅರ್ಜಿದಾರರು ಸಲ್ಲಿಸಿರುವ 1988ರ ನೋಂದಾಯಿತವಲ್ಲದ ಪಾಲು ವಿಭಾಗ ಪತ್ರದ ಪ್ರಕಾರ ಯಾವುದೇ ಹಕ್ಕು ಬದಲಾವಣೆ ಆಗಿರುವ ಬಗ್ಗೆ ಅರ್ಜಿದಾರರು ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಸದರಿ ಜಮೀನು ಅರ್ಜಿದಾರ-1 ರವರಿಗೆ ತಮ್ಮ ತಂದೆಯಿಂದ ಬಂದಿರುವುದು ಯಾವ ಪ್ರಕಾರ ಅಂದರೆ ಪಾಲು ವಿಭಾಗ ಅಥವಾ ಪೋತಿ ಅಥವಾ ಖರೀದಿ ಮೂಲಕವೇ ಎಂಬುದನ್ನು ದೃಢೀಕರಿಸಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ತಕರಾರುದಾರರು ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು, ಇದನ್ನು ದಾನಪತ್ರದ ಮೂಲಕ ನೀಡಲು ಬರುವುದಿಲ್ಲ ಎಂದು ಮತ್ತು ಸದರಿ ಜಮೀನಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಅರ್ಜಿದಾರ-1 ರವರು ತಮ್ಮ ಹಿರಿಯ ಮಗನಾದ ಅರ್ಜಿದಾರ-2 ರವರಿಗೆ ಸ್ಥಿರಾಸ್ತಿಯ ದಾನಪತ್ರದ ಮೂಲಕ ನೋಂದಣಿ ಮಾಡಿರುತ್ತಾರೆ. ಪಿತ್ರಾರ್ಜಿತ ಆಸ್ತಿಯನ್ನು ದಾನ ಮಾಡಲು ಬರುವುದಿಲ್ಲ ಎಂದು ತಕರಾರುದಾರರು ಸದರಿ ನೋಂದಾಯಿತ ದಾನಪತ್ರದ ಬಗ್ಗೆ ಪ್ರಶ್ನಿಸಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ ಅರ್ಜಿದಾರ-1 ರವರು ತಾವು ಪಡೆದಿರುವ ಪಿತ್ರಾರ್ಜಿತ ಆಸ್ತಿಯ ಹಕ್ಕಿನ ಬಗ್ಗೆ ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/22/2015-16 ದಿನಾಂಕ:29-08-2016.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ನಂ.50/2015-16 ರ ಪ್ರಕರಣದಲ್ಲಿ ಉಭಯ ಪಕ್ಷಕಾರರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸ್ಥಿರಿಕರಿಸಿಕೊಂಡು ಪರಿಹಾರ ಕಂಡುಕೊಳ್ಳಲು ಸೂಚಿಸುತ್ತಾ, ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.